**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಬೈಲಹೊಂಗಲ**

**ಸಿ.ಸಿ ನಂಃ 761/2025**

**ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಬೈಲಹೊಂಗಲ ಪೋಲಿಸ್ ಠಾಣೆ,**

**-ವಿರುದ್ಧ-**

**ಆರೋಪಿಃ ಯಂಕಪ್ಪ ಸಿದ್ದಪ್ಪಾ ಮಜ್ಜಗೆನ್ನವರ,**
ವಯಸ್ಸುಃ 54 ವರ್ಷ, ಉದ್ಯೋಗಃ ಬಸ್ಸ ಚಾಲಕ,
ಸಾಃ ಸಾರಾಪೂರ, ತಾಃ ರಾಮದುರ್ಗ.

**ಆಪಾದನೆ**

**ಶ್ರೀಮತಿ. ರೋಹಿಣಿ ಡಿ ಬಸಾಪುರ,** ಪ್ರ.ದ.ನ್ಯಾ.ದಂಡಾಧಿಕಾರಿಗಳು, ಬೈಲಹೊಂಗಲ ಆದ ನಾನು ನಿಮ್ಮ ಮೇಲೆ ಮಾಡುವ ಆಪಾದನೆ ಇಂತಿದೆಃ

ಬೈಲಹೊಂಗಲ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ, ಬೈಲಹೊಂಗಲ ಶಹರದ ಇಂಚಲ ಕ್ರಾಸ್ ಹತ್ತಿರ ಬೈಲಹೊಂಗಲ ಬೆಳಗಾವಿ ರಸ್ತೆ ಮೇಲೆ ದಿನಾಂಕಃ 24.02.2025 ರಂದು 09.30 ಗಂಟೆ ಸುಮಾರಿಗೆ ಪಿರ್ಯಾದಿಯವರು ತಮ್ಮೂರ ನಾಗನೂರಗೆ ಹೋಗುವ ಸಲುವಾಗಿ ಕೆಎಸಆರಟಿಸಿ ಬಸ್ಸ ಸಂಖ್ಯೆ ಕೆಎ-42/ಎಫ್-0577 ನೇದ್ದರಲ್ಲಿ ಹತ್ತಿದ್ದು ಇಂಚಲ ಕ್ರಾಸ ಹತ್ತಿರ ಹೋಗುತ್ತಿದ್ದು ಕಂಡಕ್ಟರೆ ಇದು ಬೆವಿನಕೊಪ್ಪ ಹೋಗುವ ಬಸ್ಸ ಅಂತಾ ಹೇಳಿದ್ದು ಆಗ ಪಿರ್ಯಾದಿಯವರು ಬಸ್ಸ ಇಳಿಯುತ್ತೇನೆ ಅಂತಾ ಕಂಡಕ್ಟರಗೆ ಹೇಳಿದ್ದು ಆಗ ಕಂಡ್ಕರ ಸೀಟಿ ಹೊಡೆದಿದ್ದು ಆಗ ಆರೋಪಿತರಾದ ನೀವು ತಾವು ನಡೆಸುತ್ತಿದ್ದ ಕೆಎಸಆರಟಿಸಿ ಬಸ್ಸ ಸಂಖ್ಯೆ ಕೆಎ-42/ಎಪಿ.-0577 ನೇದ್ದನ್ನು ನಿಲ್ಲಿಸಿದ್ದು ಆಗ ಪಿರ್ಯಾದಿಯವರು ಬಸ್ಸ ಇಳಿಯುತ್ತಿರುವಾಗ ಬಸ್ಸ ಚಾಲಕನು ಪಿರ್ಯಾದಿ ಇಳಿಯುವ ಕಡೆಗೆ ಗಮನ ಕೊಡದೇ, ತಾವು ನಡೆಸುತ್ತಿದ ಸದರಿ ಬಸ್ಸನ್ನು ಅತೀವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು, ಪಿರ್ಯಾದಿಗೆ ಬಸ್ಸನಿಂದಾ ಕೆಳಗೆ ಕೆಡವಿ ಅಪಘಾತ ಪಡಿಸಿ, ಆ ಮೂಲಕ ಕಲಂ. 281 ರ ಬಿ.ಎನ್.ಎಸ್. 2023 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಕೆಎಸಆರಟಿಸಿ ಬಸ್ಸನ್ನು ಅತೀವೇಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಒಮ್ಮೆಲೆ ಬಸ್ಸನ್ನು ಚಲಾಯಿಸಿ ಪಿರ್ಯಾದಿಗೆ ಬಸ್ಸನಿಂದಾ ಕೆಳಗೆ ಕೆಡವಿ ಅಪಘಾತ ಪಡಿಸಿ ಅವಳ ಬಲಗಾಲಿಗೆ, ನಡಕ್ಕೆ ಮತ್ತು ಬಲಗೈಗೆ ಭಾರಿ ಗಾಯ ಪಡಿಸಿ, ಆ ಮೂಲಕ ಕಲಂ. 125(ಬಿ) ಬಿ.ಎನ್.ಎಸ್. 2023 ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ, ಎಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

**1)** ಈಗ ನಾನು ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿದೆಯೇ?
ಉತ್ತರ ಆ ಃ

**2)** ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ಇಲ್ಲವೋ ?
ಉತ್ತರ ಆಃ

(ಆರೋಪಿತರಿಗೆ ಅಪಾದನೆಯ ಸಾರಾಂಶವನ್ನು ಅವರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಕೇಳಿ ಅವರ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸಹಿ/-

ದಿನಾಂಕಃ 15.10.2025 ಪ್ರ.ದ.ನ್ಯಾ.ದಂಡಾಧಿಕಾರಿಗಳು, ಬೈಲಹೊಂಗಲ